ತಲುಪಿದೆವು. ಆ ಪ್ರಯಾಣವನ್ನು ವಿವರಿಸುವುದಾದರೆ ಅದೇ ಒಂದು ದೊಡ್ಡ ಕಥೆ. ಅವರದ್ದು ಹಳೆಯ ಕಾಲದ ಬೃಹತ್ತಾದ ಮನೆ. ಕೃಷಿ ಕುಟುಂಬ ಅವರದ್ದು. ಮನೆಯ ಜಗಲಿಯಲ್ಲಿರುವ ಕಂಬವೊಂದಕ್ಕೆ ಒರಗಿ ಒಬ್ಬರು ವ್ಯಕ್ತಿ ಕುಳಿತಿದ್ದರು. ತುಂಡು ಪಂಚೆ ಉಟ್ಟು, ಹೆಗಲಿಗೊಂದು ವಸ್ತ್ರ ಹಾಕಿಕೊಂಡು, ವೀಳ್ಯದೆಲೆಗೆ ಸುಣ್ಣ ಹಚ್ಚುತ್ತಾ ಕುಳಿತಿದ್ದ ವ್ಯಕ್ತಿಯ ಬಳಿ ಹೋಗಿ ನಾವಿಬ್ಬರೂ, 'ಗುರು ಕಿಟ್ಟಪ್ಪ ಪಿಳ್ಳೈಯವರನ್ನು ಕಾಣಲು ತಂಜಾವೂರಿನಿಂದ ಬಂದಿದ್ದೇವೆ, ನಾವು ಅಲ್ಲಿನ ಪ್ರಸಿದ್ಧ ನೃತ್ಯಪಟುಗಳು. ಅಲ್ಲಿ ತುಂಬಾಮಂದಿ ನಮಗೆ ಕಿಟ್ಟಪ್ಪ ಪಿಳ್ಳೈ ಅವರಿಂದ ನೃತ್ಯ ಕಲಿಯಿರಿ ಎಂದು ಸಲಹೆ ಮಾಡಿದರು. ಅದಕ್ಕಾಗಿ ಕಷ್ಟಪಟ್ಟು ಬಂದಿದ್ದೇವೆ. ದಯವಿಟ್ಟು ಅವರನ್ನು ಮಾತನಾಡಿಸಲು ಅವಕಾಶ ಕೊಡಿ' ಎಂದು ಕೇಳಿದೆವು. ಹಾಗೆ ವೀಳ್ಯದೆಲೆಗೆ ಸುಣ್ಣ ಹಚ್ಚುತ್ತ ಕುಳಿತ ವ್ಯಕ್ತಿ, ಆ ಮನೆಯ ಕೆಲಸದಾಳಿರಬಹುದು ಎಂದು ನಾವು ಭಾವಿಸಿದ್ದೆವು. ಆದರೆ ಅವರೇ ಕಿಟ್ಟಪ್ಪ ಪಿಳ್ಳೈ ಎಂದು ನಮಗೆ ನಂತರದಲ್ಲಿ ಗೊತ್ತಾಯಿತು. ನಮಗೆ ಇಂಗ್ಲಿಷ್ ಬರುತ್ತಿರಲಿಲ್ಲ. ನಾವು ಅಣುಪ್ಪಾನಡಿಯ 'ಬೇಮಸ್ ಡಾನ್ಸರ್ಸ್' ಎಂದು ಪದೇ ಪದೇ ಹೇಳುತ್ತಿದ್ದೆವು. ನಾವು ಹುಡುಗರಾಗಿ ಹುಟ್ಟಿ ಮತ್ತೆ ಹುಡುಗಿಯೆಂದು ನಮಗೆ ಗೊತ್ತಾಗಿ, ಮನೆಯಿಂದ ಹೊರಹಾಕಿಸಿಕೊಂಡಿದ್ದೇವೆ ಎಂದೆಲ್ಲ ನಮ್ಮ ಅಂತರಂಗವನ್ನು ತೋಚಿದ ಪದಗಳಲ್ಲಿ ಹೇಳಿಕೊಂಡೆವು. ನನ್ನ ಬಳಿ ಇದ್ದ ಹರುಕು ಆಲ್ಬಂ ಅನ್ನು ಅವರ ಕೈಗಿಟ್ಟೆ.

ಅವರೊಬ್ಬರು ಚಕ್ರವರ್ತಿ ಸಮಾನ ವ್ಯಕ್ತಿಯಾಗಿದ್ದರು. ವೈಜಯಂತಿಮಾಲಾ, ಯಾಮಿನಿ ಕೃಷ್ಣಮೂರ್ತಿ, ಸುಚೇತಾ ಚಾಪೇಕರ್, ಸುಧಾರಾಣಿ ರಘುಪತಿ, ವಹಿದಾ ರೆಹಮಾನ್ ಅವರಂತಹ ಪ್ರಸಿದ್ಧ ಅಭಿನೇತ್ರಿಯರು ಅವರ ಶಿಷ್ಯಂದಿರಾಗಿದ್ದರು. ಅವರ ಪೂರ್ವಿಕರು ತಂಜಾವೂರು ಶೈಲಿಯ ಭರತನಾಟ್ಯ ಪಿತಾಮಹರೆಂದೇ ಹೆಸರಾದವರು. ಕಿಟ್ಟಪ್ಪ ಪಿಳ್ಳೈ ಅವರು ಆರನೇ ತಲೆಮಾರಿನವರಾಗಿದ್ದರು ಎಂಬುದನ್ನೆಲ್ಲ ಕಲಿಯಲು ನಮಗೆ ಬಹಳವೇ ಸಮಯ ಬೇಕಾಯಿತು. ಆ ಮನೆಯ ಅಂಗಳದಲ್ಲಿ ತೊದಲು ನುಡಿಗಳಲ್ಲಿ ನಾವು ಪರಿಚಯ ಮಾಡಿಕೊಂಡ ಬಳಿಕ, ಅವರು ನಮ್ಮನ್ನು ಚೆನ್ನಾಗಿ ಮಾತನಾಡಿಸಿದರು. 'ಈಗಲೇ ಬೇಡ, ಸ್ವಲ್ಪ ಸಮಯವಾದಮೇಲೆ ಬನ್ನಿ. ಆಗ ನೋಡೋಣ' ಎಂದು ಹೇಳಿ ವಾಪಸ್ ಕಳಿಸಿದರು. ಹೀಗೆ ಒಂದು ವರ್ಷ ಕಾದ ಬಳಿಕ, ಅವರು ನಮ್ಮನ್ನು ಶಿಷ್ಯಂದಿರನ್ನಾಗಿ ಸ್ವೀಕರಿಸಿದರು. ಬಹುಶಃ ಅವರು ನಮ್ಮ ಆಸಕ್ತಿಯನ್ನು ಪರೀಕ್ಷಿಸಿರಬೇಕು. ಹಾಗೆ ಅಲ್ಲಿ ಸೇರಿದ ಬಳಿಕ ನಮ್ಮ ಜೀವನದ ದಿಕ್ಕು ಬದಲಾಯಿತು. 15 ವರ್ಷಗಳ



ಕಾಲ ಅವರ ಮನೆಯಲ್ಲಿ ಇರಿಸಿಕೊಂಡು ನಮಗೆ ನೃತ್ಯದ ಪಾಠಗಳನ್ನು ಹೇಳಿಕೊಟ್ಟರು. ಇಂದು ಬೃಹತ್ ವೇದಿಕೆಗಳಲ್ಲಿ ನನ್ನನ್ನು ಪರಿಚಯಿಸುವಾಗ, 'ಗುರುಕುಲ ಪದ್ಧತಿಯಲ್ಲಿ ಕಲಿತಿರುವ ನರ್ತಕಿ ನಟರಾಜ್' ಎಂದು ಭಾರೀ ದೊಡ್ಡ ಸ್ವರದಲ್ಲಿ ಪರಿಚಯಿಸುತ್ತಾರೆ.